**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ:ಆಯವ್ಯಯ:ಸುತ್ತೋಲೆ:ಸ.ಪ್ರ.ದ.ಕಾ: :2020-2021

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:19.08.2020.

**ಸುತ್ತೋಲೆ**

ವಿಷಯ: ವಿವಿಧ ಬಾಕಿಗಳು ಮತ್ತು 2019-20ನೇ ಸಾಲಿನ ವೇತನ ಪಾವತಿಸಲು ಅವಶ್ಯವಿರುವ ಅನುದಾನದ ಮಾಹಿತಿ ನೀಡುವ ಬಗ್ಗೆ

ಉಲ್ಲೇಖ

1) ಸರ್ಕಾರದ ಪತ್ರ ಸಂಖ್ಯೆ:ಆಇ:81:ಆನಿಪ:>2020 ದಿನಾಂಕ:15.06.2020
2) ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ:11.08.2020
3) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ:ಹೆಚ್.ಆರ್.ಎಂ.ಎಸ್:01:2020-21 ದಿನಾಂಕ:13.08.2020
4) ಸರ್ಕಾರದ ಪತ್ರ ಸಂಖ್ಯೆ:ಆಇ:48:ಜಿಐಇ:2020 ದಿನಾಂಕ:16.06.2020

****

ಈ ಕಛೇರಿಯ ಉಲ್ಲೇಖ(2)ರ ಸಮ ಸಂಖ್ಯೆಯ ದಿನಾಂಕ:11.08.2020ರ ಸುತ್ತೋಲೆಯ ಕಡೆಗೆ ಪ್ರಾಂಶುಪಾಲರ ಗಮನವನ್ನು ಸೆಳೆಯಲಾಗಿದೆ. ಸದರಿ ಸುತ್ತೋಲೆಯಲ್ಲಿ 2019-20ನೇ ಸಾಲಿನಲ್ಲಿ ವೇತನ ಡ್ರಾ ಮಾಡದಿರುವ ಮತ್ತು ಇತರೆ ಬಾಕಿಗಳ ಮಾಹಿತಿಯನ್ನು google form link ನಲ್ಲಿ ದಿನಾಂಕ:14.08.2020ರೊಳಗಾಗಿ ಸಲ್ಲಿಸಲು ಸೂಚಿಸಲಾಗಿತ್ತು. ಇಲ್ಲಿಯವರೆವಿಗೂ 60 ಕಾಲೇಜುಗಳಿಂದ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಸದರಿ ಕಾಲೇಜುಗಳ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು, ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ವೈಯಕ್ತಿಕ ಗಮನಹರಿಸಿ ಮಾಹಿತಿಯನ್ನು ದಿನಾಂಕ:21.08.2020ರೊಳಗೆ ಸಲ್ಲಿಸಲು, ಒಂದು ವೇಳೆ ಯಾವುದೇ ಬಾಕಿ ಇಲ್ಲದಿದ್ದಲ್ಲಿ ***ಶೂನ್ಯ ವರದಿ***ಯನ್ನು ಸಲ್ಲಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ.

ಮುಂದುವರೆದು, ಉಲ್ಲೇಖ(1)ರ ಸರ್ಕಾರದ ಪತ್ರದ ಪ್ರಕಾರ ಹಬ್ಬದ ಮುಂಗಡವನ್ನು ಮಾತ್ರ ಕ್ಲೇಮು ಮಾಡಬಹುದಾಗಿರುತ್ತದೆ. ಎಚ್.ಆರ್.ಎಂ.ಎಸ್ ನಲ್ಲಿ ವಿವಿಧ ಬಾಕಿಗಳನ್ನು ಕ್ಲೇಮು ಮಾಡಲು ಅವಕಾಶವನ್ನು ಕಲ್ಪಿಸಲಾಗಿದ್ದು, ಆದರೆ ಉಲ್ಲೇಖ(4)ರ ಸರ್ಕಾರದ ಪತ್ರದಲ್ಲಿನ ನಿರ್ದೇಶನದ ಪ್ರಕಾರ 2019-20ನೇ ಸಾಲಿನ ವೇತನ ಮತ್ತು ವಿವಿಧ ಬಾಕಿಗಳನ್ನು ಲೆಕ್ಕ ಶೀರ್ಷಿಕೆವಾರು ಕ್ರೂಢೀಕರಿಸಿ ದೃಢೀಕರಣದೊಂದಿಗೆ ಏಕೈಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಅನುಮತಿಗಾಗಿ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ವೇತನ ಮತ್ತು ಇತರೆ ಬಾಕಿಗೆ ಸಂಬಂಧಿಸಿದಂತೆ ಕಾಲೇಜುಗಳಿಂದ ಸ್ವೀಕೃತವಾದ ಮಾಹಿತಿಯನ್ನು ಕ್ರೂಢೀಕರಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದ್ದು, ಸರ್ಕಾರದ ಅನುಮತಿ ಪಡೆದ ನಂತರವೇ ಕ್ಲೇಮು ಮಾಡಬೇಕಾಗಿರುತ್ತದೆ. ಆದ್ದರಿಂದ **2019-20ನೇ ಸಾಲಿನ ವೇತನ ಮತ್ತು ವಿವಿಧ ಬಾಕಿಗಳನ್ನು ಎಚ್.ಆರ್.ಎಂ.ಎಸ್.ನಲ್ಲಿ ಕ್ಲೇಮು ಮಾಡದಿರಲು ಕಟ್ಟುನಿಟ್ಟಾಗಿ ಸೂಚಿಸಿದೆ**

ಪ್ರಸ್ತುತ ಲೆಕ್ಕ ಶೀರ್ಷಿಕೆ: 2202-03-103-2-01ರ ಉಪ ಲೆಕ್ಕ ಶೀರ್ಷಿಕೆ 002, 003, 011, 014 ಮತ್ತು 020ರಡಿಯಲ್ಲಿ ಆಗಸ್ಟ್-2020ರ ಮಾಹೆಯ ವೇತನವನ್ನು ಮಾತ್ರ ಕ್ಲೇಮು ಮಾಡಲು ಅಗತ್ಯವಿರುವ ಅನುದಾನ ಮಾತ್ರ ಲಭ್ಯವಿದ್ದು, ಹಿಂದಿನ ಸಾಲಿನ ವೇತನ ಮತ್ತು ಇತರೆ ಬಾಕಿಗಳನ್ನು ಕ್ಲೇಮು ಮಾಡಿ ಆಗಸ್ಟ್-2020ರ ಮಾಹೆಯ ವೇತನಕ್ಕೆ ಅನುದಾನ ಕೊರತೆಯುಂಟಾದಲ್ಲಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲಾಗುವುದು. ಅಂತಿಮವಾಗಿ ಉಲ್ಲೇಖ(4)ರ ಸರ್ಕಾರದ ಪತ್ರದಲ್ಲಿ ವೇತನ ಮತ್ತು ವಿವಿಧ ಬಾಕಿಗಳಿಗೆ ಸಂಬಂಧಿಸಿದ ಪ್ರಕರಣ ಬಿಟ್ಟು ಹೋದಲ್ಲಿ ಇಲಾಖೆಗಳೇ ಜವಾಬ್ದಾರಾಗುತ್ತಾರೆಂದು ಸೂಚಿಸಿದ್ದು, ಈ ಸೂಚನೆಗಳು ಎಲ್ಲಾ ಕಾಲೇಜುಗಳಿಗೂ ಅನ್ವಯಿಸಲಿದ್ದು, ಆದ್ದರಿಂದ **ಪ್ರಾಂಶುಪಾಲರುಗಳು ತಮ್ಮ ವೈಯಕ್ತಿಕ ಗಮನಹರಿಸಿ ಮಾಹಿತಿಗಳನ್ನು ನಿಗಧಿತ ದಿನಾಂಕದೊಳಗೆ ಸಲ್ಲಿಸಲು ತದನಂತರ ಸ್ವೀಕೃತವಾದ ಮಾಹಿತಿಯನ್ನು ಪರಿಗಣಿಸುವುದಿಲ್ಲವೆಂದು ಕಟ್ಟುನಿಟ್ಟಾಗಿ ಸೂಚಿಸಿದೆ.**

19/8/2020

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

**ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು.**

ಪ್ರತಿಯನ್ನು:

1. ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ , ಕೇಂದ್ರ ಕಛೇರಿ, ಬೆಂಗಳೂರು – ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮಕ್ಕಾಗಿ

2.ಕಛೇರಿ ಪ್ರತಿ.

## 2019-20ನೇ ಸಾಲಿನ ವಿವಿಧ ಕಾಲೇಜುಗಳ ಬಾಕಿ ವೇತನವನ್ನು ಸಲ್ಲಿಸದಿರುವ ಕಾಲೇಜುಗಳ ಪಟ್ಟಿ

| SL.NO | NAME OF COLLEGES |
|---|---|
| 1 | Maharanis Arts, Commerce and Management College for Women, Bangalore - 560 001. |
| 2 | Govt. Science College, N.T.Road, Bangalore - 560 001. |
| 3 | Maharanis Science College for Women, Bangalore - 560 001. |
| 4 | Govt. First Grade College, Sulebele - 562 129, Hoskote Tq. |
| 5 | Govt. First Grade College, Bidadi - 562 109, Ramanagar Tq. |
| 6 | Govt. First Grade College, Turuvekere - 572 227. |
| 7 | Govt. Law College, Kolar - 563 101 |
| 8 | Govt. First Grade College, Hanagodu - 571 105, Hunsur Tq. |
| 9 | Govt. First Grade College for Women, Hunsur - 571 105 |
| 10 | Govt. First Grade College, Chamarajnagar - 571 313. |
| 11 | Govt. College, Mandya - 571 401. |
| 12 | Govt. First Grade College, Arkalgudu - 573 102. |
| 13 | Govt. First Grade College, Alur. |
| 14 | Govt. Home Science College for Women, Holenarasipura - 573 211 |
| 15 | Govt. First Grade College, Halli Mysore - 573 210, Holenarasipura Tq. |
| 16 | Govt. First Grade College, Nyamathi - 577 223 |
| 17 | Govt. First Grade College, Belthangadi - 574 214. |
| 18 | Govt. First Grade College, Byndoor - 576 214 |
| 19 | Govt. First Grade College, Karkala - 574 104. |
| 20 | Govt. First Grade College, Kaapu - 574 106 |
| 21 | Govt. First Grade College, Napoklu, Madikeri Tq |
| 22 | Sree Jagadguru Fakireshwara Govt. First Grade College, Shirahatti - 582 120. |
| 23 | Govt. First Grade College, (Mun School Campus), Gadag - 582 101 |
| 24 | Govt. First Grade College, Mundgod - 581 349. |
| 25 | Govt. First Grade College, Joida - 581 186 |
| 26 | Govt. First Grade College, Pashchapura 591 122, Hukkeri Tq. |
| 27 | Govt. First Grade College, Badami - 587 201 |
| 28 | Govt. First Grade College, Kaladagi- 587 204, Bagalkot Tq. |
| 29 | Govt. First Grade College, Sindagi - 586 128 |
| 30 | Govt. First Grade College, Kalagi - 585 312 |
| 31 | Govt Law College, Marthur,Gulbarga |
| 32 | Govt. First Grade College, Manvi - 584 123. |
| 33 | Govt. First Grade College, Jalahalli - 584 116 Devdurga Tq. |
| 34 | Govt. First Grade College, Yelburga - 583 236. |
| 35 | Govt. First Grade College, Kanakagiri - 584 119, Gangavathi Tq. |
| 36 | Govt. First Grade College, Kudligi - 583 135. |
| 37 | Smt. Saraladevi Satheshchandra Agarwal Govt. First Grade College, S. N Pet, Bellary - 583101. |
| 38 | Govt. First Grade College, Aurad - 585 326 |
| 39 | Govt. First Grade College, Mannahalli - 585 403, Bidar Tq |
| 40 | Govt. First Grade College, Hulsuru - 585 416 |
| 41 | Govt. First Grade College, Sagar |
| 42 | Govt. First Grade College, Midigeshi, Madhugiri Tq. |
| 43 | Govt. First Grade College, Arehalli, Belur Tq. |
| 44 | Govt. First Grade College, Terakanambi, Gundlupet Tq |
| 45 | Govt. First Grade College for Women, Sindhanur, Raichur |
| 46 | Govt. First Grade College, Turuvihal, Sindhanur Tq. |
| 47 | Govt First Grade Women college Yadahalli .Mudhol Tq Bagalkot District |
| 48 | Govt. Law College, Chamarajanagara |
| 49 | Residential Govt first grade College Haradanahalli.Hole Narsipur Tq,Hassan District |
| 50 | Residential Govt. First Grade College,Mudnal,Yadgir Dt |
| 51 | Residential Govt. First Grade College, Haalahalli, Bidar |
| 52 | Residential Govt. First Grade College, gundepalli, sedum kalburagi |
| 53 | Residential Govt. First Grade College, Adalageri, Mudhebihal Tq, Vijayapura |
| 54 | Residential Govt. First Grade College, Kavithala, Manvi Tq. Raichur |

| | |
|---|---|
| 55 | Residential Govt. First Grade College, Thalabaala, Yalburga Tq, Koppala |
| 56 | Residential Govt. First Grade College, Devagiri, Haveri |
| 57 | Residential Govt. First Grade College, Malladihalli, Holalkere Tq, Chitradurga |
| 58 | Residential Govt. First Grade College, Avani, Mulbaglu Tq., Kolar |
| 59 | Residential Govt. First Grade College, Ekappura, Chamarajanagara |
| 60 | SC/ST Residential Govt. First Grade College, Devarayasamudra, Mulabagilu Tq., Kolar Dist. |

1493059/2020/O/o DS(IFA)-ED

ಕರ್ನಾಟಕ ಸರ್ಕಾರ

ಸಂಖ್ಯೆ : ಆಇ 48 ಜವಇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ 15.06.2020

ಮಾನ್ಯರೇ,

ವಿಷಯ : ಬಾಕಿ ವೇತನ ಮತ್ತು ವೇತನ ಭತ್ಯೆಗಳನ್ನು ಪಾವತಿಸಲು ಅನುದಾನ ಒದಗಿಸುವ ಬಗ್ಗೆ.

*******

ಪ್ರತಿ ವರ್ಷ ಆಯವ್ಯಯದಲ್ಲಿ ಎಲ್ಲಾ ಸರ್ಕಾರದ ಸೇವೆಯಲ್ಲಿ ಇರುವ ಅಧಿಕಾರಿ/ ನೌಕರರ ವೇತನ, ಭತ್ಯೆಗಳಿಗೆ ಅಗತ್ಯವಾದಷ್ಟು ಅನುದಾನವನ್ನು ಇಲಾಖಾವಾರು ಮತ್ತು ಲೆಕ್ಕ ಶೀರ್ಷಿಕೆವಾರು ಒದಗಿಸಲಾಗುತ್ತದೆ. ಈ ಅನುದಾನವನ್ನು ಉಪಯೋಗಿಸಿಕೊಂಡು ನೌಕರರ ವೇತನ, ಭತ್ಯೆಗಳನ್ನು ವಿಳಂಬ ಮಾಡದೇ ಆಯಾ ಆರ್ಥಿಕ ವರ್ಷದಲ್ಲೇ ಪಾವತಿಸುವುದು ಸಂಬಂಧಿಸಿದ ಇಲಾಖಾ ಅಧಿಕಾರಗಳ ಜವಾಬ್ದಾರಿ ಮತ್ತು ಕರ್ತವ್ಯ

ಅದರಂತೆಯೇ 2019-20 ನೇ ಸಾಲಿನ ಆಯವ್ಯಯದಲ್ಲಿ, ಸರ್ಕಾರದ ಸೇವೆಯಲ್ಲಿ ಇರುವ ಅಧಿಕಾರಿ/ ನೌಕರರ ವೇತನ ಪಾವತಿಸಲು ಅವಶ್ಯವಿರುವ ಅನುದಾನವನ್ನು ಒದಗಿಸಲಾಗಿತ್ತು. ಹಲವಾರು ಇಲಾಖೆಗಳ ವೇತನ ಮತ್ತು ಬಟವಾಡೆ ಅಧಿಕಾರಿಗಳು (DDO) ತಮ್ಮ ಅಧೀನದಲ್ಲಿನ ಸಿಬ್ಬಂದಿಯ ವೇತನವನ್ನು ನಿಗಧಿತ ಕಾಲಮಿತಿಯೊಳಗೆ ಸೆಳೆಯದೆ ಇರುವುದರಿಂದ, ವೇತನ ಮತ್ತು ವೇತನ ಭತ್ಯಗಳಿಗೆ ಮೀಸಲಿಟ್ಟಿದ್ದ ಅನುದಾನವು ವ್ಯಪಗತ (Lapse) ಆಗಿರುತ್ತದೆ. ಇದರಿಂದ ಹಿಂದಿನ ವರ್ಷಗಳ ವೇತನದ ವೆಚ್ಚದ ಹೊರೆ ಪ್ರಸ್ತುಕ ಸಾಲಿನ ಆಯವ್ಯಯದ ಮೇಲೆ ಪರಿಣಾಮ ಬೀರುತ್ತದೆ.

2019-20 ನೇ ಸಾಲಿನ ಬಾಕಿ ವೇತನ ಮತ್ತು ವೇತನ ಭತ್ಯೆಗಳನ್ನು ಪಾವತಿಸಲು ಹೆಚ್ಚುವರಿ ಅನುದಾನವನ್ನು ಕೋರಿ, ಆಡಳಿತ ಇಲಾಖೆಗಳು ಸಿಬ್ಬಂದಿವಾರು 2020-21 ನೇ ಸಾಲಿನಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸುತ್ತಿರುವುದನ್ನು ಆರ್ಥಿಕ ಇಲಾಖೆಯು ಗಮನಿಸಿದೆ.

2020-21 ನೇ ಸಾಲಿನ ಆಯವ್ಯಯದಲ್ಲಿ, ಪ್ರಸಕ್ತ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಮಾತ್ರ ವೇತನ ಮತ್ತು ಭತ್ಯೆಗಳಿಗೆ ಅಗತ್ಯವಾದ ಅನುದಾನವನ್ನು ಒದಗಿಸಲಾಗಿದೆ. 2019-20 ಮತ್ತು ಹಿಂದಿನ ಸಾಲಿನ ವೇತನ ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಹೆಚ್ಚುವರಿ ಅನುದಾನ ಒದಗಿಸಬೇಕಾಗುತ್ತದೆ. ಈ ರೀತಿ ಪ್ರತ್ಯೇಕ ಪ್ರಸ್ತಾವನೆಗಳು ಸಲ್ಲಿಸಿದಲ್ಲಿ ಸಮಗ್ರ ಮಾಹಿತಿ ಲಭ್ಯವಿಲ್ಲದೇ ಇಲಾಖೆಗಳಿಗೆ ವೇತನ ಮತ್ತು ಭತ್ಯೆಗಳಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನದ ನಿಖರವಾದ ಅಂದಾಜು ಮಾಡಲು ಸಾಧ್ಯವಿಲ್ಲ. ಇದರಿಂದ ಅನಾವಶ್ಯಕ ಆಡಳಿತ ಸಮಸ್ಯೆಗಳು ಉದ್ಭವಿಸುತ್ತವೆ.

ಅದುದರಿಂದ, ಆಡಳಿತ ಇಲಾಖೆಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಇಲಾಖೆಗಳಿಂದ ವೇತನ ಮತ್ತು ಭತ್ಯೆಗಳ ವಿವರಗಳನ್ನು ಅಂದರೆ ಎಷ್ಟು ಮಂದಿಗೆ, ಯಾವ ಮಾಹೆಯಿಂದ ಬಾಕಿ ಇದೆ, ಎಷ್ಟು ಅನುದಾನದ ಅವಶ್ಯಕತೆ ಇದೆ, ವೇತನವಲ್ಲದೇ ಯಾವ ಭತ್ಯೆಯ ಪಾವತಿಯ ಬಾಕಿಗೆ ಅನುದಾನ ಅಗತ್ಯವಿದೆ, ಯಾವ ಕಾರಣಕ್ಕೆ ವೇತನ & ಭತ್ಯೆ ಸೆಳೆದು ಪಾವತಿಸಲು ಸಾಧ್ಯವಾಗಿರುವುದಿಲ್ಲ ಮತ್ತು ಇದಕ್ಕೆ ಜವಾಬ್ದಾರರು ಯಾರು ಇತ್ಯಾದಿ ಮಾಹಿತಿಗಳೊಂದಿಗೆ ಲೆಕ್ಕ

Scanned with CamScanner

ಶೀರ್ಷಿಕೆವಾರು ವಿವರಗಳನ್ನು ಕ್ರೋಡೀಕರಿಸಿ ಲೆಕ್ಕಚಾರದ (Soft copy / Hard copy) ವಿವರಗಳೊಂದಿಗೆ ದೃಢೀಕರಿಸಿ ಏಕೈಕ ಕ್ರೋಡೀಕೃತ ಪ್ರಸ್ತಾವನೆ ಸಲ್ಲಿಸುವಂತೆ ಆಡಳಿತ ಇಲಾಖೆಗೆ ತಿಳಿಸಿದೆ. ಈ ರೀತಿ ಸಲ್ಲಿಸಿದ ಕ್ರೋಡೀಕೃತ ಪ್ರಸ್ತಾವನೆಯಲ್ಲಿ ಬಾಕಿ ಪಾವತಿಸಬೇಕಾದ ಎಲ್ಲಾ ಪ್ರಕರಣಗಳು ಮತ್ತು ಮೊತ್ತ ಒಳಗೊಂಡಿದೆ ಎಂಬುದನ್ನು ಪ್ರಮಾಣೀಕರಿಸುವಂತೆ ತಿಳಿಸಿದೆ. ಯಾವುದೇ ಪ್ರಕರಣಗಳು ಬಿಟ್ಟು ಹೋದಲ್ಲಿ ಇಲಾಖೆಗಳೇ ಜವಾಬ್ದಾರಾಗುತ್ತಾರೆ.

ಅನಂತರ ಸಲ್ಲಿಸುವ ಯಾವುದೇ ಪ್ರಸ್ತಾವನೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

(ಡಾ। ಏಕ್‌ರೂಪ್ ಕೌರ್)
ಕಾರ್ಯದರ್ಶಿ (ಆ&ಸಂ)
ಆರ್ಥಿಕ ಇಲಾಖೆ

ಇವರಿಗೆ:

ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ / ಇಲಾಖಾ ಮುಖ್ಯಸ್ಥರು

Scanned with CamScanner

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ: 81 ಆನಿಓ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:15.06.2020.

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ, ಬೆಂಗಳೂರು.

ಇವರಿಗೆ:
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಇ-ಆಡಳಿತ ಕೇಂದ್ರ, ಕೊಠಡಿ ಸಂ:146.ಎ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.

16/6/2020

ಮಾನ್ಯರೆ,

ವಿಷಯ-ಹಬ್ಬದ ಮುಂಗಡ ಸೆಳೆಯುವ ಬಗ್ಗೆ ಸ್ಪಷ್ಟೀಕರಣ ಕೋರುವ ಕುರಿತು.

ಉಲ್ಲೇಖ:-ತಮ್ಮ ಕಛೇರಿಯ ಪತ್ರ ಸಂ:CEG- 14011/12/2020-PO- (HRMS), ದಿ:16.05.2020.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಿರುವ ವಿಷಯವನ್ನು ಪರಿಶೀಲಿಸಲಾಯಿತು, ಈಗಾಗಲೇ ಸರ್ಕಾರದ ಆದೇಶ ಸಂ:ಆಇ 2 ಟಿಎಫ್‌ಪಿ 2020, ದಿ:30.05.2020 ರ ಆದೇಶದಲ್ಲಿ ಹಬ್ಬದ ಮುಂಗಡವು ಸೇರಿದಂತೆ ಎಲ್ಲಾ ವೇತನ ಭತ್ಯೆಗಳನ್ನು ಸೆಳೆಯಲು ವೇತನ, ಶೀರ್ಷಿಕೆಗಳಡಿಯಲ್ಲಿ 8/12 ರ ಭಾಗವನ್ನು (ಏಪ್ರಿಲ್, ಮೇ ತಿಂಗಳು ಸೇರಿದಂತೆ) ಬಿಡುಗಡೆ ಮಾಡಲು ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿರುವುದರಿಂದ ಅದರಂತೆ ಕ್ರಮ ವಹಿಸುವಂತೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,
15/6/2020
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ಎಫ್.ಆರ್&ಬಿ.ಸಿ.ಸಿ).